ಇತ್ತೀಚೆಗೆ ಕಾರ್ಯನಿಮಿತ್ತ ಕುಂದಾಪುರದ ಮದ್ದುಗುಡ್ಡೆಯಲ್ಲಿರುವ ಕುಳ್ಳಪ್ಪು ಮನೆಗೆ ಹೋಗಿದ್ದೆ. ಆಗ ಅವರ ಪುತ್ರ ಸತೀಶ್ ಪೈಯವರು 'ಜಯವಂತ ಮಾಮ್ 1979 ರಲ್ಲಿ 'ದೆಣಿ ರಾದ್ದಾಂತ' ನಾಟಕದಲ್ಲಿ ನಾವೆಲ್ಲ ಒಟ್ಟಾಗಿ ನಟಿಸಿರುವ ಈ ಫೋಟೋ ನೀವು ತೆಗೆದುಕೊಂಡು ಹೋಗಿ' ಎನ್ನುತ್ತ ಅದನ್ನು ನನ್ನ ಕೈಗಿತ್ತಾಗ ಮರುಕಳಿಸಿದ್ದು 4 ದಶಕಗಳ ಹಿಂದೆ ನಾನು ಪುರೋಹಿತನಾಗಿ ನಟಿಸಿದ್ದ ಸವಿ ನೆನಪು.

■ **ಪಿ.ಜಯವಂತ ಪೈ**



# 'ನಾನು ಪುರೋಹಿತನಾದದ್ದು..'

ನೆನಪುಗಳು ಯಾವತ್ತೂ ಹರಳುಗಟ್ಟಿದ ಪಾಕದಂತೆ. ಸುಮ್ಮನೆ ಕುಳಿತಾಗ, ನಿದ್ದೆಗೆ ಜಾರುವಾಗ, ಒಬ್ಬಂಟಿಯಾದಾಗ ಥಟ್ಟನೆ ಸುರುಳಿ ಸುರುಳಿಯಾಗಿ ಬಿಚ್ಚಿಕೊಳ್ಳುತ್ತವೆ, ಸಿಹಿ ನೆನಪುಗಳು ಮರುಕಳಿಸಿದಾಗ ಮನ ಮುದಗೊಳ್ಳುತ್ತದೆ, ಹಗುರಾಗುತ್ತದೆ, ಕಚಗುಳಿ ಇಡುತ್ತದೆ, ಇನ್ನಿಲ್ಲದಂತೆ ಕಾಡುತ್ತದೆ. ಇದೇ ಸವಿನೆನಪುಗಳ ವಿಶೇಷತೆ.

ನಾನೊಬ್ಬ ನಿವೃತ್ತ ಬ್ಯಾಂಕ್ ಉದ್ಯೋಗಿ. 40 ವರ್ಷಗಳ ಹಿಂದೆ 25ರ ಯುವಕನಾಗಿದ್ದ ನಾನು ನಾಟಕಗಳಲ್ಲಿ ನಟಿಸಬೇಕು, ಪ್ರೇಕ್ಷಕರನ್ನು ನಗಿಸಬೇಕು ಎಂಬ ಕನಸು ಕಾಣುತ್ತ ಇದ್ದೆ. ಅದೇ ಸಮಯಕ್ಕೆ ಸರಿಯಾಗಿ ಬ್ಯಾಂಕ್ ಉದ್ಯೋಗಿಯಾಗಿದ್ದ ಶಾಂತಾರಾಮ ಹೆಗ್ಡೆ ಮತ್ತು ಖ್ಯಾತ ರಂಗನಟ ಹಾಗೂ ಸಿನಿನಟ ಕುಂದಾಪುರದ ಬಾಲಕೃಷ್ಣ ಪೈ (ಕುಳ್ಳಪ್ಪು) ಒಟ್ಟಾಗಿ 'ಶ್ರೀ ಲಕ್ಷ್ಮೀವೆಂಕಟೇಶ ಕೊಂಕಣಿ ನಾಟಕ ಸಭಾ' ಹುಟ್ಟುಹಾಕಿ ನನ್ನನ್ನೂ ತಮ್ಮ ಗರಡಿಗೆ ಸೇರಿಸಿಕೊಂಡರು.

ಹತ್ತು ಹಲವು ಆಸಕ್ತರನ್ನು ಒಗ್ಗೂಡಿಸಿ ಕುಂದಾಪುರ ಪೇಟೆ ವೆಂಕಟರಮಣ ದೇವಸ್ಥಾನದಲ್ಲಿ ನಾವು ಪ್ರದರ್ಶಿಸಿದ ಪ್ರಥಮ ನಾಟಕ 'ದೆಣಿ ರಾದ್ದಾಂತ'. ಅದರಲ್ಲಿ ನನ್ನದು ಪುರೋಹಿತನ ಪಾತ್ರ. ತಲೆಯ ಮೇಲೊಂದು ಜುಟ್ಟು, ಕಂಕುಳಲ್ಲೊಂದು ಹಳೆಯ ಛತ್ರಿ, ಮೂಗಿನ ಮೇಲೊಂದು ಗ್ಲಾಸ್ ಇಲ್ಲದ ಕನ್ನಡಕ, ಕೈಯಲ್ಲೊಂದು ನಶ್ಯದ ಡಬ್ಬಿ ಹಿಡಿದು ಆಗಾಗ ಪುಡಿ ಸೇದುತ್ತ 'ಆಯ್ಕ ತುಮ್ಮಿ ಸಮಾಜ ಅವಸ್ಥಾ' ಎಂದು ಹಾಡುತ್ತಿದ್ದಂತೆ ನಾಲ್ಕು ಮಕ್ಕಳು ನನ್ನ ಸುತ್ತ ಕುಣಿಯುತ್ತ ಕೊನೆಯಲ್ಲಿ ನನ್ನ ಕಚ್ಚೆ ಬಿಚ್ಚಿ ಓಡುತ್ತಿದ್ದಂತೆ ನೋಡುಗರು ಎದ್ದು ಬಿದ್ದು ನಗುವುದು. ಈ ನಾಟಕದ ಒಂದು ದೃಶ್ಯ. ಉತ್ತಮ ಕಥೆ, ಸಂಭಾಷಣೆ ಹಾಗೂ ಮನಮುಟ್ಟುವ ಹಾಡುಗಳಿಂದಾಗಿ ಅಂದು ಹಿಟ್ ಆದ ಈ ನಾಟಕ ಮುಂದೆ ಗಂಗೊಳ್ಳಿಯ ಮಲ್ಯರಮಠ ವೆಂಕಟರಮಣ ದೇವಸ್ಥಾನ, ಉಡುಪಿಯ ಲಕ್ಷ್ಮೀವೆಂಕಟೇಶ ದೇವಸ್ಥಾನ, ಪಡು ತಿರುಪತಿ ಖ್ಯಾತಿಯ ಕಾರ್ಕಳ ವೆಂಕಟರಮಣ ದೇವಸ್ಥಾನ, ಬೆಂಗಳೂರಿನ ರವೀಂದ್ರ ಕಲಾಕ್ಷೇತ್ರ ಮುಂತಾದ ಕಡೆಗಳಲ್ಲಿ ಪ್ರದರ್ಶನಗೊಂಡು ಪ್ರೇಕ್ಷಕರ ಪ್ರಶಂಸೆಗೆ ಪಾತ್ರವಾಯಿತು.

ಒಂದು ನಾಟಕದಲ್ಲಿ ಕುಳ್ಳಪ್ಪು ಅವರು ಗಂಡನಾಗಿ ಹಾಗೂ ನಾನು ಅವರ ಹೆಂಡತಿಯಾಗಿ ನಟಿಸಿ ನಾವಿಬ್ಬರೂ ಡ್ಯಾನ್ಸ್ ಮಾಡಿ ನೋಡುಗರನ್ನು ನಗೆಗಡಲಲ್ಲಿ ತೇಲಿಸಿದ್ದೆವು. ಹೆಸರಾಂತ ರಂಗನಟ ಹಾಗೂ ಸಿನಿನಟರಾದ ನಾರಾಯಣ ಶ್ಯಾನುಬೋಗ್ (ಟಿಪ್ಪು) ಹಾಗೂ ಕೆ.ಜಿ. ಶ್ಯಾನುಭಾಗರೊಂದಿಗೆ ಕೊಂಕಣಿ ನಾಟಕಗಳಲ್ಲಿ ನಟಿಸುವ ಯೋಗ ನನ್ನದಾಗಿತ್ತು. ಮುಂದೆ ಬೇರೆ ಊರಿಗೆ ವರ್ಗವಾದುದರಿಂದ ನನ್ನ ಹಾಗೂ ನಾಟಕದ ನಂಟು ಕಳಚಿತು. ಅಂದು ಚಡ್ಡಿ ಹಾಕಿ ಕುಣಿದಿದ್ದ ಕುಳ್ಳಪ್ಪು ಪುತ್ರರಾದ ಸತೀಶ್ ಪೈ ಹಾಗೂ ಸಂತೋಷ್ ಪೈ ಮತ್ತು ನಾರಾಯಣ ಶ್ಯಾನುಭೋಗ್‌ರ ಪುತ್ರ ಅಶೋಕ್ ಶ್ಯಾನುಭೋಗ್‌ರು ಇಂದು ರಂಗಭೂಮಿಯ ಹೆಸರಾಂತ ಕಲಾವಿದರು. ಈ ತ್ರಿಮೂರ್ತಿಗಳು ಪ್ರಮುಖ ಪಾತ್ರದಲ್ಲಿರುವ 'ಮೂರು ಮುತ್ತು' ನಾಟಕವೂ ದೇಶ ವಿದೇಶಗಳಲ್ಲಿ ದಾಖಲೆಯ ಸಾವಿರಾರು ಪ್ರದರ್ಶನಗಳನ್ನು ಕಂಡಿದ್ದು ಎಲ್ಲೆಡೆ ಜಯಭೇರಿ ಬಾರಿಸಿದೆ.

ಇತ್ತೀಚೆಗೆ ಕಾರ್ಯನಿಮಿತ್ತ ಕುಂದಾಪುರದ ಮದ್ದುಗುಡ್ಡೆಯಲ್ಲಿರುವ ಕುಳ್ಳಪ್ಪು ಮನೆಗೆ ಹೋಗಿದ್ದೆ. ಆಗ ಅವರ ಪುತ್ರ ಸತೀಶ್ ಪೈಯವರು 'ಜಯವಂತ ಮಾಮ್ 1979 ರಲ್ಲಿ 'ದೆಣಿ ರಾದ್ದಾಂತ' ನಾಟಕದಲ್ಲಿ ನಾವೆಲ್ಲ ಒಟ್ಟಾಗಿ ನಟಿಸಿರುವ ಈ ಫೋಟೋ ನೀವು ತೆಗೆದುಕೊಂಡು ಹೋಗಿ' ಎನ್ನುತ್ತ ಅದನ್ನು ನನ್ನ ಕೈಗಿತ್ತಾಗ ಮರುಕಳಿಸಿದ್ದು 4 ದಶಕಗಳ ಹಿಂದೆ ನಾನು ಪುರೋಹಿತನಾಗಿ ನಟಿಸಿದ್ದ ಸವಿ ಸವಿ ನೆನಪು. ■

---

**ನೀವೂ ಬರೆಯಿರಿ**

*ಸವಿ ಸವಿ ನೆನಪು.. ಇದೊಂದು ಹೊಸ ಅಂಕಣ.*

*ಬದುಕಿನಲ್ಲಿ ಸಾವಿರ ಸವಿನೆನಪುಗಳಿವೆ. ಅಂತಹ ನೆನಪುಗಳಲ್ಲಿ ಒಂದನ್ನು ಹೆಕ್ಕಿ ತೆಗೆದು ಅಕ್ಷರ ರೂಪಕ್ಕಿಳಿಸಿ. ಅದನ್ನು ಉತ್ತಮ ಚಿತ್ರ ಸಮೇತ ನಮಗೆ ಕಳುಹಿಸಿ. ಬರಹ ಸುಮಾರು 400 ಶಬ್ದಗಳಿರಲಿ. ನಿಮ್ಮ ಹೆಸರು, ವಿಳಾಸ, ಫೋನ್ ನಂಬರ್ ಸ್ಪಷ್ಟವಾಗಿ ಬರೆಯಿರಿ.*